## ಸಹ್ಯಾದ್ರಿ 10ಕೆ ರನ್ ಲಾಂಛನ ಬಿಡುಗಡೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ ಉಪಕುಲಪತಿ ಡಾ.ಎಸ್.ಸಚ್ಚಿದಾನಂದ ಮಾಹಿತಿ

# ಮಂಗಳೂರಿನಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ರಾಜೀವ್ ಗಾಂಧಿ ವಿ.ವಿ ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಿಸಲಿದ್ದು, ಇದರ ಜತೆಗೆ ಮಂಗಳೂರಿನಲ್ಲಿ 2 ಎಕರೆ ಜಾಗದಲ್ಲಿ ವಿ.ವಿ.ಯ ಪ್ರಾದೇಶಿಕ ಕೇಂದ್ರ ಸ್ಥಾಪನೆ ಜತೆಗೆ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಿಸುವ ಯೋಜನೆ ಇದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿ.ವಿ ಉಪಕುಲಪತಿ ಡಾ.ಎಸ್.ಸಚ್ಚಿದಾನಂದ ಹೇಳಿದರು.

ನಗರದ ಡಾ.ಟಿ.ಎಂ.ಎ ಪೈ ಕನ್ವೆನ್ಶನ್ ಹಾಲ್‌ನಲ್ಲಿ ಗುರುವಾರ ಸಹ್ಯಾದ್ರಿ 10ಕೆ ರನ್ ಮಂಗಳೂರು ಇದರ ಲಾಂಛನ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಕ್ರೀಡೆಯನ್ನು ಪಠ್ಯವಾಗಿ ಪರಿಗಣಿಸುವ ಅಗತ್ಯವಿದೆ. ರಾಜೀವ್ ಗಾಂಧಿ ವಿ.ವಿ ಕ್ರೀಡೆಯಲ್ಲಿ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ ಎಂದರು.



ವಿಜಯವಾಣಿ ಚಿತ್ರ

ಸಹ್ಯಾದ್ರಿ 10ಕೆ ರನ್ ಮಂಗಳೂರು ಇದರ ಲಾಂಛನ ಬಿಡುಗಡೆ ಸಮಾರಂಭದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿ.ವಿ.ಯ ಉಪಕುಲಪತಿ ಡಾ.ಎಸ್.ಸಚ್ಚಿದಾನಂದ , ಸಂಗೀತ ನಿರ್ದೇಶಕ ಗುರುಕಿರಣ್, ಮಂಗಳೂರು ವಿವಿ ಉಪ ಕುಲಪತಿ ಡಾ.ಪಿ.ಎಸ್.ಯಡಪಡಿತ್ತಾಯ, ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಕೆ.ಪಿ.ಪುರುಷೋತ್ತಮ, ಸಹ್ಯಾದ್ರಿ ಎಜುಕೇಶನ್ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ, ಒಲಿಂಪಿಯನ್ ವಂದನಾ ಶಾನುಭಾಗ್, ಮಂಗಳೂರು ವಿಟಿಯು ವಿಸ್ತರಣಾ ಕೇಂದ್ರದ ಶಿವಕುಮಾರ್ ಎಚ್.ಆರ್, ಸ್ಟೀವನ್ ಡಯಾಸ್ ಮೊದಲಾದವರು ಉಪಸ್ಥಿತರಿದ್ದರು.

ಮ್ಯಾರಥಾನ್‌ನ ಬ್ರ್ಯಾಂಡ್ ಅಂಬಾಸಿಡರ್, ಸಂಗೀತ ನಿರ್ದೇಶಕ ಗುರುಕಿರಣ್ ಮಾತನಾಡಿ, ಮಂಗಳೂರಿನಲ್ಲಿ ಉತ್ತಮ ಕ್ರೀಡಾಪಟುಗಳು ಇದ್ದಾರೆ. ಇದರಿಂದ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗಿದೆ. ಇಂತಹ ಮ್ಯಾರಥಾನ್ ಮಂಗಳೂರು ನಗರದ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಏರಿಸಲಿದೆ ಎಂದರು.

ಮಂಗಳೂರು ವಿವಿ ಉಪ ಕುಲಪತಿ ಡಾ.ಪಿ.ಎಸ್ .ಯಡಪಡಿತ್ತಾಯ ಮ್ಯಾರಥಾನ್‌ನ ವೆಬ್‌ಸೈಟ್ ಅನಾವರಣ ಮಾಡಿ ಮಾತನಾಡಿದರು. ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಕೆ.ಪಿ.ಪುರುಷೋತ್ತಮ ಮ್ಯಾರಥಾನ್ ಲೋಗೋ ಅನಾವರಣ ಮಾಡಿದರು. ಸಹ್ಯಾದ್ರಿ ಎಜುಕೇಶನ್ ಸಂಸ್ಥೆ ಅಧ್ಯಕ್ಷ ಮಂಜುನಾಥ ಭಂಡಾರಿ ಮಾತನಾಡಿ, ಈ ಬಾರಿ ಮಂಗಳೂರು ಮ್ಯಾರಥಾನ್‌ನಲ್ಲಿ 10 ಸಾವಿರ ಯುವಜನರನ್ನು ಒಟ್ಟು ಸೇರಿಸುವ ಮೂಲಕ ಕ್ರೀಡಾಹಬ್ಬವಾಗಿ ಪರಿವರ್ತನೆ ಮಾಡುವ ಕೆಲಸ ಮಾಡಲಿದೆ ಎಂದರು.

ಕ್ರೀಡಾ ಕ್ಷೇತ್ರದ ಸಾಧನೆಗೆ ಒಲಿಂಪಿಯನ್ ಆನಂದ್ ಲೂವಿಸ್ ಮಿನೇಜಸ್ ಅವರನ್ನು ಸನ್ಮಾನಿಸಲಾಯಿತು. ಒಲಿಂಪಿಯನ್ ವಂದನಾ ಶಾನುಭಾಗ್, ಮಂಗಳೂರು ವಿಟಿಯು ವಿಸ್ತರಣಾ ಕೇಂದ್ರದ ಶಿವಕುಮಾರ್ ಎಚ್.ಆರ್ ಉಪಸ್ಥಿತರಿದ್ದರು. ಸ್ಟೀವನ್ ಡಯಾಸ್ ವಂದಿಸಿದರು. ದೀಕ್ಷಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

### ಫೆ.2ರಂದು ಸಹ್ಯಾದ್ರಿ 10ಕೆ ರನ್

ಸ್ವಚ್ಛ-ಪರಿಸರ ಹಸಿರು-ಉಸಿರು ಮತ್ತು ಆರೋಗ್ಯಕರ ಪರಿಸರದ ಬಗ್ಗೆ ಕಾಳಜಿಗಾಗಿ ದಕ್ಷಿಣ ಕನ್ನಡ ಅಥ್ಲೆಟಿಕ್ ಅಸೋಸಿಯೇಶನ್ , ಭಂಡಾರಿ ಫೌಂಡೇಶನ್, ಕರ್ನಾಟಕ ಸರಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಗಳೂರು ವಿವಿ, ವಿಟಿಯು ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಯ ಸಹಭಾಗಿತ್ವದಲ್ಲಿ 2020ರ ಫೆ.2ರಂದು ಮಂಗಳಾ ಸ್ಟೇಡಿಯಂನಲ್ಲಿ ಬೆಳಗ್ಗೆ 6ಕ್ಕೆ ಸಹ್ಯಾದ್ರಿ 10ಕೆ ರನ್ ಮ್ಯಾರಥಾನ್ ನಡೆಯಲಿದೆ.